# ಜಗನ್ಮಾತೆಯ ಸ್ವರೂಪ



✵ ಬ್ರಹ್ಮಜ್ಞಾನ ದೊರೆತ ನಂತರ ನಿನ್ನ ಸತಿಯನ್ನು ನೀನು ಸಾಕ್ಷಾತ್ ಭಗವತಿಯೇ ಎಂಬುದಾಗಿ ನೋಡಲಾರಂಭಿಸುತ್ತೀಯೆ. ಚಂಡಿಯಲ್ಲಿ ಹೇಳಿದೆ: 'ಭಗವತಿ ಎಲ್ಲಾ ಭೂತಗಳಲ್ಲಿಯೂ ಮಾತೃರೂಪದಲ್ಲಿ ಇದ್ದಾಳೆ' ಎಂದು. ಆಕೆಯೇ ನಿನ್ನ ಹೆತ್ತ ತಾಯಿಯಾಗಿದ್ದಾಳೆ.

✵ ಜಗನ್ಮಾತೆಯ ಸಾಕ್ಷಾತ್ಕಾರವನ್ನು ಪಡೆದುಕೊಂಡುದೇ ಆದರೆ, ಭಕ್ತಿಯೂ ದೊರೆಯುತ್ತದೆ, ಜ್ಞಾನವೂ ದೊರೆಯುತ್ತದೆ.

✵ **ಭಕ್ತ :** ಶಾಸ್ತ್ರದಲ್ಲಿ ಎರಡು ಅಭಿಪ್ರಾಯಗಳಿವೆ. ಒಂದು ಪುರಾಣದ ದೃಷ್ಟಿಯಿಂದ, ಕೃಷ್ಣ ಚಿದಾತ್ಮ, ರಾಧೆ ಚಿಚ್ಛಕ್ತಿ; ಇನ್ನೊಂದರ ದೃಷ್ಟಿಯಿಂದ ಕೃಷ್ಣನೇ ಕಾಳಿ-ಆದ್ಯಾಶಕ್ತಿ. ಇದು ಹೇಗೆ?

**ಶ್ರೀರಾಮಕೃಷ್ಣರು:** ಈ ಎರಡನೆಯದು ದೇವೀಪುರಾಣದ ಹಾಗೆ. ಇದರಲ್ಲಿ ಹೇಳಿದೆ, ಕಾಳಿಯೇ ಕೃಷ್ಣ ಆಗಿಬಿಟ್ಟಿದ್ದಾಳೆ ಎಂಬುದಾಗಿ. ಇದು ನಿಜವಾದರೆ ತಾನೆ ಏನು? ಭಗವಂತ ಅನಂತ, ಮಾರ್ಗವೂ ಅನಂತ.

✵ ಭಗವತಿಗೆ ಹೇಳಿದೆ: 'ಹೇ ತಾಯಿ, ನಾನೊಬ್ಬ ಮೂರ್ಖ. ನೀನು ನನಗೆ ತಿಳಿಸಿಕೊಡು, ವೇದ, ಪುರಾಣ, ತಂತ್ರ ಇವೇ ಮೊದಲಾದ ಶಾಸ್ತ್ರಗಳಲ್ಲಿ ಏನೇನಿದೆಯೆಂದು.' ಭಗವತಿ ಹೇಳಿದಳು: 'ವೇದಾಂತದ ಸಾರ ಬ್ರಹ್ಮ ಸತ್ಯ, ಜಗತ್ತು ಮಿಥ್ಯೆ.'

✵ ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಂಡ ವ್ಯಕ್ತಿ ಹೆಂಗಸನ್ನು ಕಾಮದ ಕಣ್ಣಿನಿಂದ ನೋಡುವುದಿಲ್ಲ. ಆದ್ದರಿಂದ ಆಕೆಯನ್ನು ಕಂಡರೆ ಆತನಿಗೆ ಹೆದರಿಕೆಯಾಗುವುದಿಲ್ಲ. ಆತನ ಕಣ್ಣಿಗೆ ಸ್ಪಷ್ಟವಾಗಿ ಕಂಡುಬರುತ್ತದೆ, ಹೆಂಗಸು ಬ್ರಹ್ಮಮಯಿಯ ಅಂಶ ಎಂಬುದು. ಆಕೆಯನ್ನು ಸಾಕ್ಷಾತ್ ಭಗವತಿಯೇ ಎಂಬುದಾಗಿ ಆತ ಪೂಜೆಮಾಡುತ್ತಾನೆ.

✵ ಬ್ರಹ್ಮ ಶಕ್ತಿ ಅಭೇದ. ಶಕ್ತಿಯನ್ನು ಒಪ್ಪದೆ ಇದ್ದರೆ ಈ ಜಗತ್ತು ಮಿಥ್ಯೆಯಾಗಿ ಬಿಡುತ್ತದೆ. ನಾನು, ನೀನು, ಮಠ, ಹೆಂಡತಿ, ಮಕ್ಕಳು ಎಲ್ಲಾ ಮಿಥ್ಯೆಯಾಗಿ ಬಿಡುತ್ತವೆ. ಆದ್ಯಾಶಕ್ತಿ ಆಧಾರವಾಗಿರುವುದರಿಂದ ಈ ಜಗತ್ತು ನಿಂತುಕೊಂಡಿದೆ.

✵ **ಭಕ್ತ :** ನಿಜವಾಗಿ ಕೆಟ್ಟವರಾರು-ಹೆಂಗಸೊ, ಗಂಡಸೊ?

**ಶ್ರೀರಾಮಕೃಷ್ಣರು:** ವಿದ್ಯಾರೂಪಿಣಿ ಹೆಂಗಸೂ ಇದ್ದಾಳೆ. ಅವಿದ್ಯಾರೂಪಿಣಿ ಹೆಂಗಸೂ ಇದ್ದಾಳೆ. ವಿದ್ಯಾರೂಪಿಣಿ ಹೆಂಗಸು ಭಗವಂತನ ಕಡೆಗೆ ಕರೆದೊಯ್ಯುತ್ತಾಳೆ; ಆದರೆ ಅವಿದ್ಯಾರೂಪಿಣಿ ಹೆಂಗಸು ಭಗವಂತನನ್ನು ಮರೆಸಿ ಸಂಸಾರದಲ್ಲಿ ಮುಳುಗಿಸಿಬಿಡುತ್ತಾಳೆ.

✵ ಭಗವಂತನ ಮಾಯೆಯಿಂದಲೇ ಈ ಜಗತ್ತು, ಈ ಸಂಸಾರ ಉದ್ಭವಿಸಿದೆ. ಮಹಾಮಾಯೆಯಲ್ಲಿ ವಿದ್ಯಾಮಾಯೆ, ಅವಿದ್ಯಾಮಾಯೆ ಎರಡೂ ಇವೆ. ವಿದ್ಯಾಮಾಯೆಯನ್ನು ಅವಲಂಬಿಸಿದರೆ, ಸಾಧುಸಂಗ, ಜ್ಞಾನ, ಭಕ್ತಿ, ಪ್ರೇಮ, ವೈರಾಗ್ಯ ಇವೆಲ್ಲಾ ಉಂಟಾಗುತ್ತದೆ. ಅವಿದ್ಯಾಮಾಯೆ ಎಂದರೆ ಪಂಚಭೂತಗಳು ಮತ್ತು ಪಂಚೇಂದ್ರಿಯಗಳ ವಸ್ತುಗಳು — ರೂಪ, ರಸ, ಗಂಧ, ಸ್ಪರ್ಶ, ಶಬ್ದ ಇವು ಭಗವಂತನನ್ನು ಮರೆಸಿಬಿಡುತ್ತವೆ.

✵ **ಭಕ್ತ :** ಅವಿದ್ಯೆಯಿಂದ ಅಜ್ಞಾನವುಂಟಾಗುವುದಾದರೆ, ಯಾಕೆ ಭಗವಂತ ಅದನ್ನು ಸೃಷ್ಟಿಸಿದ?

**ಶ್ರೀರಾಮಕೃಷ್ಣರು:** ಆತನ ಲೀಲೆ. ಕತ್ತಲೆ ಇಲ್ಲದೆ ಇತ್ತು ಎಂದರೆ ಬೆಳಕಿನ ಮಹಿಮೆಯನ್ನು ಅರಿಯಲಾಗುವುದಿಲ್ಲ. ದುಃಖ ಇಲ್ಲದೆ ಇತ್ತು ಎಂದರೆ ಸುಖ ಏನು ಎಂಬುದನ್ನು ಅರಿಯಲಾಗುವುದಿಲ್ಲ. ಕೆಟ್ಟದ್ದು ಏನು ಎಂಬುದರ ಅರಿವು ಇದ್ದರೆ ತಾನೆ ಒಳ್ಳೆಯದು ಏನು ಎಂಬುದರ ಅರಿವು ಆಗಬೇಕಾದರೆ. ಮತ್ತೆ ಸಿಪ್ಪೆ ಇರುವುದರಿಂದ ತಾನೆ ಮಾವಿನಕಾಯಿ ಬೆಳೆಯುತ್ತದೆ, ಹಣ್ಣಾಗುತ್ತದೆ. ಮಾವಿನ ಕಾಯಿ ಪೂರ್ತಿ ಹಣ್ಣಾಗಿ ತಿನ್ನಲು ಸಿದ್ಧವಾಯಿತು ಎಂದರೆ ಆಗ ಸಿಪ್ಪೆ ಬಿಸಾಡಿಬಿಡಬೇಕಾಗುತ್ತದೆ. ಮಾಯಾರೂಪದ ಸಿಪ್ಪೆ ಇರುವುದರಿಂದ ಕ್ರಮೇಣ ಬ್ರಹ್ಮಜ್ಞಾನ ಸಾಧ್ಯ. ಮಾವಿನಕಾಯಿ ಸಿಪ್ಪೆಯ ಹಾಗೆ ವಿದ್ಯಾಮಾಯೆ, ಅವಿದ್ಯಾಮಾಯೆ ಎರಡೂ ಆವಶ್ಯಕ.

✵ ಯಾವಾಗ ಭಗವಂತ ಸೃಷ್ಟಿ-ಸ್ಥಿತಿ-ಪ್ರಳಯ ಕಾರ್ಯಗಳನ್ನು ಮಾಡುತ್ತಾನೋ, ಆಗ ಆತನಿಗೇ ಸಗುಣಬ್ರಹ್ಮ ಅಥವಾ ಆದ್ಯಾಶಕ್ತಿ ಅಂತ ಹೆಸರು; ಯಾವಾಗ ಆತನನ್ನು ತ್ರಿಗುಣಾತೀತ ಎಂಬುದಾಗಿ ಭಾವಿಸುತ್ತೇವೆಯೋ, ಆಗ ಆತನಿಗೆ ವಾಙ್ಮನಾತೀತ ನಿರ್ಗುಣಬ್ರಹ್ಮ ಅಂತ ಹೆಸರು-ಪರಬ್ರಹ್ಮ ಅಂತ ಹೆಸರು.

✵ ಮನುಷ್ಯ ಭಗವಂತನ ಮಾಯೆಯ ಬಲೆಗೆ ಸಿಕ್ಕಿ ತನ್ನ ಸ್ವರೂಪವನ್ನು ಮರೆತುಕೊಂಡು ಬಿಡುತ್ತಾನೆ. ತಂದೆಯ ಅನಂತ ಐಶ್ವರ್ಯಕ್ಕೆ ತಾನು ಉತ್ತರಾಧಿಕಾರಿ ಎಂಬುದನ್ನು ಮರೆತು ಬಿಡುತ್ತಾನೆ. ಆತನ ಮಾಯೆ ತ್ರಿಗುಣಮಯವಾದ್ದು. ಈ ಮೂರು ಗುಣಗಳೂ ದರೋಡೆಕೋರರೇ.

**'ಶ್ರೀರಾಮಕೃಷ್ಣ ವಚನವೇದ'** ದಿಂದ